


ಇದನ್ನೇ ಕೋಸ್ಟರಿಕಾ ಮಾಡಿದ್ದು, ಟಾನ್ಜಾನಿಯಾ, ಕೀನ್ಯಾ ಮುಂತಾದ ರಾಷ್ಟ್ರಗಳು ಅನುಸರಿಸಿದ್ದು.

## ಮೈಸೂರಿನ ಮಹತ್ವ

ಪರಿಸರ ಟೂರಿಸಂ ಅಭಿವೃದ್ಧಿಗೆ ಮೈಸೂರಿಗೆ ಇರುವಷ್ಟು ಅವಕಾಶ ದೇಶದ ಇನ್ಯಾವ ಭಾಗಕ್ಕೂ ಇಲ್ಲ. ಇದಕ್ಕೊಂದು ಭೌಗೋಳಿಕ ಸಮರ್ಥನೆಯನ್ನು ಹೀಗೆ ಕೊಡಬಹುದು. ಮೈಸೂರನ್ನು ಕೇಂದ್ರವಾಗಿ ಇರಿಸಿಕೊಂಡರೆ, ಜಿಲ್ಲೆಯ ಸುಮಾರು 200 ಡಿಗ್ರಿ ಪರಿಧಿಯಲ್ಲಿ ಕಾಡು ವಿಸ್ತಾರವಾಗಿ ಹಬ್ಬಿದೆ. ಇವೆಲ್ಲವನ್ನೂ ಕೇವಲ 70 ಕಿಲೋಮೀಟರ್ ಅಂತರದಲ್ಲಿ ಸಮೀಪಿಸಬಹುದು. ಬಂಡೀಪುರ, ನಾಗರಹೊಳೆ, ಬಿಳಿಗಿರಿ ರಂಗನಬೆಟ್ಟ... ಹೀಗೆ ಪಟ್ಟಿ ದೊಡ್ಡದಿದೆ. ಈ ರೀತಿಯ ವಿಶಿಷ್ಟ ಅವಕಾಶ ಭಾರತದ ಯಾವ ಪ್ರದೇಶಕ್ಕೂ ಇಲ್ಲ.

ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಸರ ಟೂರಿಸಂ ಅನ್ನು ಇಲ್ಲಿ ಅಭಿವೃದ್ಧಿ ಪಡಿಸಿದರೆ ಲಾಭ ಸಾಕಷ್ಟಿದೆ. ಈಗಾಗಲೇ ಮೈಸೂರು ಪ್ರವಾಸಿ ತಾಣವೆಂದು ಹೆಸರು ಮಾಡಿದೆ. ಇಡೀ ದೇಶದಲ್ಲೇ ಸ್ವಚ್ಛ ನಗರ ಎಂಬ ಬಿರುದೂ ಸಿಕ್ಕಿದೆ. ಪ್ರವಾಸಿಗರನ್ನು ಸೆಳೆಯುವ ವಿಚಾರದಲ್ಲಿ ವಿಶ್ವಮಾನ್ಯತೆಯೂ ಮೈಸೂರಿಗಿದೆ. ಈ ಕಾರಣದಿಂದಾಗಿ, ಮೈಸೂರನ್ನು ಹುಡುಕಿಕೊಂಡು ಬರುವ ವಿದೇಶಿಯರೂ ಸಾಕಷ್ಟು ಹೆಚ್ಚೇ ಇರುತ್ತಾರೆ. ಈ ಧನಾತ್ಮಕ ಅಂಶವನ್ನು ಬಳಸಿಕೊಂಡು, ಪ್ರವಾಸೋದ್ಯಮಕ್ಕೆ 'ಪರಿಸರ ಟೂರಿಸಂ'ನ ಹೊಸ ಬಣ್ಣ ನೀಡುವ ಕೆಲಸವಾದರೆ ಅನುಕೂಲವಾಗುತ್ತದೆ.

ಮೈಸೂರಿಗಿರುವ ಮತ್ತೊಂದು ವಿಶೇಷ ಅವಕಾಶವೆಂದರೆ, ಇಲ್ಲಿ ಹರಿಯುವ ನದಿಗಳು. ನದಿಗಳನ್ನು ಬಳಸಿಕೊಂಡು ಸಾಕಷ್ಟು ಪ್ರವಾಸೋದ್ಯಮ ಪ್ಯಾಕೇಜ್‌ಗಳನ್ನು ಮಾಡಬಹುದು. ವ್ಯವಸ್ಥಿತವಾಗಿ ಇದನ್ನು ಮಾಡಿದರೆ ಈ ಅವಕಾಶ ಇನ್ನೂ ಹೆಚ್ಚು. ಇನ್ನು ನದಿಗಳಿಗೇನೂ ಕಡಿಮೆಯಿಲ್ಲ. ಕಾವೇರಿ, ಕಪಿಲಾ ಸೇರಿದಂತೆ ಅನೇಕ ಸಣ್ಣಪುಟ್ಟ ನದಿಗಳೂ ಇಲ್ಲಿವೆ. ರಂಗನತಿಟ್ಟು, ಕೊಕ್ಕರೆ ಬೆಳ್ಳೂರು ಮುಂತಾದ ಅನೇಕ ಪಕ್ಷಿ ತಾಣಗಳಿವೆ. ಇವನ್ನು ಬಳಸಿಕೊಂಡು ಸುತ್ತಮುತ್ತಲಿನ ಸೂಕ್ಷ್ಮ ಪರಿಸರವನ್ನು ಕಾಪಾಡಿದರೆ ಸಾಕು. ಅಲ್ಲಿರುವ ಸಣ್ಣ ಪುಟ್ಟ ಪಕ್ಷಿ, ಪ್ರಾಣಿಗಳನ್ನೇ ಪ್ರವಾಸಕ್ಕಾಗಿ ಬಳಸಿಕೊಳ್ಳುವ ಮುಕ್ತ ಅವಕಾಶ ಹೆಚ್ಚುತ್ತದೆ.

ಇನ್ನು ಕೊಡಗು ಜಿಲ್ಲೆಯನ್ನು ನಾವೆಲ್ಲಾ ನಿರ್ಲಕ್ಷಿಸಿಬಿಟ್ಟಿದ್ದೇವೆ. ಕೊಡಗಿನಲ್ಲಿ ಇರುವಷ್ಟು ಕೀಟ ವೈವಿಧ್ಯತೆ ಅಕ್ಕಪಕ್ಕ ಎಲ್ಲೂ ಇಲ್ಲ. ಇಲ್ಲಿ ಕೀಟ ಪ್ರವಾಸೋದ್ಯಮವನ್ನೇ ಅಭಿವೃದ್ಧಿ ಪಡಿಸಬಹುದು. ಪ್ರವಾಸೋದ್ಯಮ, ಸಫಾರಿ ಎಂದರೆ ಅಲ್ಲಿ, ಹುಲಿಯೇ ಇರಬೇಕು, ಸಿಂಹವೇ ಇರಬೇಕು ಎಂದೇನೂ ಇಲ್ಲ. ಪ್ರವಾಸೋದ್ಯಮದ ವ್ಯಾಪ್ತಿಯನ್ನು ಅನೇಕ ವಿಧಗಳಲ್ಲಿ ವಿಸ್ತರಿಸಿಕೊಳ್ಳಲು ಸಾಧ್ಯವಿದೆ. ಅಸಂಖ್ಯಾತ ಆಕರ್ಷಕ ಕೀಟಗಳನ್ನು ನೋಡಲು ಪ್ರವಾಸಿಗರು ಮುಗಿಬೀಳುತ್ತಾರೆ. ವಿಜ್ಞಾನಿಗಳು, ಸಂಶೋಧಕರು ಹಾತೊರೆಯುತ್ತಿರುತ್ತಾರೆ. ಇವರಿಗೆ ವೇದಿಕೆಯನ್ನೂ ಕಲ್ಪಿಸಿಕೊಟ್ಟಂತೆ ಆಗುತ್ತದೆ. ಪ್ರವಾಸೋದ್ಯಮವೂ ಕುದುರುತ್ತದೆ.

ಗಣಿಯೊಂದರಿಂದ ಅದಿರು ತೆಗೆದು ಎಷ್ಟು ಸಂಪಾದಿಸಬಹುದು? ಗರಿಷ್ಠ ಕೆಲವು ದಶಕ ಅಲ್ಲವೇ. ನಂತರ ಏನಾಗುತ್ತದೆ. ಗಣಿ ಬರಿದಾದ ಮೇಲೆ ಉದ್ಯಮ ನಿಲ್ಲಲೇಬೇಕು. ಅಲ್ಲಿನ ಉದ್ಯೋಗಿಗಳು ಬೇರೆಡೆ ಕೆಲಸ ಹುಡುಕಿಕೊಳ್ಳಲೇಬೇಕು. ನಮ್ಮ ಕೆಜಿಎಫ್ ಕಡೆಗೊಮ್ಮೆ ನೋಡಿ. ಒಂದು ಕಾಲದಲ್ಲಿ ಹೇಗಿತ್ತು... ಈಗ ಹೇಗಾಗಿದೆ? ಆದರೆ, ನೈಸರ್ಗಿಕವಾದ ಪರಿಸರವನ್ನು ಸಂರಕ್ಷಿಸಿದಾಗ ಅದು ನಿರಂತರವಾಗಿ ಆದಾಯವನ್ನು ನೀಡಬಲ್ಲದು.

## ಅಭಿವೃದ್ಧಿಗೊಂದು ಉದಾಹರಣೆ

ಪರಿಸರಪ್ರಿಯ ಯೋಜನೆಗಳಿಂದ ಇಡೀ ಒಂದು ಅರಣ್ಯಭಾಗವನ್ನೇ ಉಳಿಸಬಹುದು ಎನ್ನುವುದಕ್ಕೆ ಇಲ್ಲೊಂದು ಉದಾಹರಣೆಯಿದೆ. ಕೆಲವು ಆಸಕ್ತರು ಸ್ವಯಂಪ್ರೇರಿತರಾಗಿ ಹುಟ್ಟುಹಾಕಿದ 'ನಮ್ಮ ಸಂಘ' ಎಂಬ ಸೇವಾ ಸಂಸ್ಥೆಯೇ ಆ ಉದಾಹರಣೆ. ಇದರ ಉದ್ದೇಶವೇನೆಂದರೆ, 180 ಕಿಲೋ ಮೀಟರ್ ಉದ್ದದ ಬಂಡೀಪುರ ಅರಣ್ಯವನ್ನು ಸೌದೆ ಮುಕ್ತ ಅರಣ್ಯವನ್ನಾಗಿ ಮಾಡಬೇಕು ಎನ್ನುವುದು.

ಇದಕ್ಕಾಗಿ ಇವರು ಯಾವುದೇ ವಿದೇಶಿ ಹಣವನ್ನು ಪಡೆಯಲಿಲ್ಲ. ಬದಲಿಗೆ, ತಮ್ಮ ಸ್ನೇಹಿತರು, ಸಂಬಂಧಿಕರಿಂದಲೇ ಹಣ ಸಂಗ್ರಹಿಸಿ ಸಣ್ಣದೊಂದು ಆಂದೋಲನ ಆರಂಭಿಸಿದರು. ಬಂಡೀಪುರ ವ್ಯಾಪ್ತಿಯಲ್ಲಿ ಬರುವ ಸುಮಾರು 200 ಹಳ್ಳಿಗಳ 38 ಸಾವಿರ ಕುಟುಂಬಗಳಿಗೆ ಅಡುಗೆ ಅನಿಲ ಸೌಕರ್ಯವನ್ನು ನೀಡಿದರು. ಇದರಿಂದ ಆದ ಪ್ರಾಥಮಿಕ ಪ್ರಯೋಜನವೆಂದರೆ, ಈ ಭಾಗದ ಸುಮಾರು 2 ಲಕ್ಷ ಮಂದಿ ಅಡುಗೆಗಾಗಿ ಕಾಡಿನಿಂದ ಸೌದೆ ತರುವುದನ್ನು ಸಂಪೂರ್ಣ ನಿಲ್ಲಿಸಿದರು. ಇದರಿಂದ ಕಾಡು ಪುನಶ್ಚೇತನಗೊಳ್ಳಲು ಸಾಧ್ಯವಾಯಿತು. ಅಲ್ಲದೇ, ಸೌದೆ ಒಲೆಯಿಂದ ಮಹಿಳೆಯರು ಉಸಿರಾಟ ಸಂಬಂಧಿ ಕಾಯಿಲೆಗಳಿಂದ ನರಳುವುದು ತಪ್ಪಿತು. ಅಷ್ಟೇ ಅಲ್ಲ, 'ನಮ್ಮ ಸಂಘ'ವು ಇಲ್ಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರಾಯೋಜಕತ್ವ ನೀಡಿತು. ಸೌಲಭ್ಯ ಪಡೆದುಕೊಂಡ ಸ್ಥಳೀಯರು ಸಂಸ್ಥೆಯ ಚಟುವಟಿಕೆಗಳಿಗೆ ಬೆಂಬಲ ನೀಡಿದರು. ಕಾಡು ಚೇತರಿಸಿಕೊಳ್ಳುವ ಹಾದಿ ಹಿಡಿಯಿತು. ಜೀವ ಸಂಕುಲಗಳು ನಿರಾಳವಾದವು.

ಈಗ ಇದರ ಹೆಗ್ಗಳಿಕೆ ಏನು ಗೊತ್ತೇ? ಇಡೀ ಏಷ್ಯಾದಲ್ಲಿ ಸೌದೆಮುಕ್ತ ಏಕೈಕ ಅರಣ್ಯ ಪ್ರದೇಶವೆಂದರೆ, ಅದು ಬಂಡೀಪುರ ರಾಷ್ಟ್ರೀಯ ಉದ್ಯಾನ. 40 ಕುಟುಂಬಗಳು ಈ ಸಂಸ್ಥೆಯ ಶ್ರಮದಿಂದ ಬದುಕು ಕಂಡುಕೊಂಡಿರುವುದು ಸ್ವಾವಲಂಬಿ ಬದುಕು ನಿರ್ಮಾಣಕ್ಕೂ ಬುನಾದಿಯಾಗಿದೆ ಎನ್ನುವುದು ಒಂದು ಉದಾಹರಣೆಯಷ್ಟೇ. ಇದು ಪರಿಸರ ಟೂರಿಸಂನ ಪರಿಕಲ್ಪನೆಗೆ ಒಂದು ಮಾದರಿಯಷ್ಟೇ. ಈ ರೀತಿ ಉದ್ಯಮವೊಂದು ಸ್ಥಳೀಯರನ್ನು ಪೋಷಿಸಿದರೆ, ತಾನೂ ಬೆಳೆದುಕೊಳ್ಳುತ್ತದೆ ಎನ್ನುವುದು ಇದರ ಹೂರಣ.



ಚಿತ್ರ: ಎಂಎಸ್‌ಆರ್